ಮಹಾಲಿಂಗಪುರದ ವಿ. ಜಿ. ಮಠಪತಿಯ ಮಗಳಾದ ದಾನಮ್ಮನ ಸಂಶಯಾಸ್ಪದ ಮರಣದ ಬಗ್ಗೆ;

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ವರದಕ್ಷಿಣೆ ಸಂಬಂಧವಾಗಿ ರಾಜ್ಯದಲ್ಲಿ ಹಲವು ದುರಂತದ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿವೆ. ಈ ಸಂದರ್ಭದಲ್ಲಿ ಮಹಾಲಿಂಗಪುರದ ಎ. ಜಿ, ಮಠಪತಿಯವರ ಮಗಳಾದ ದಾನಮ್ಮ ಎಂಬಾಕೆ ಸಂಶಯಾಸ್ಪದ ರೀತಿಯಲ್ಲಿ ಮರಣ ಹೊಂದಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಗೃಹ ಸಚಿವರ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

ಬೆಳಗಾಂ ಜಿಲ್ಲೆ ಅಥಣಿ ತಾಲ್ಲೂಕು ಐಗಳಿ ಗ್ರಾಮದ ನಿವಾಸಿಯಾದ ವೀರಭದ್ರಯ್ಯ ಗುರು ಲಿಂಗಯ್ಯ ಮಠಪತಿ ಈತನು ಮುಖ್ಯಮಂತ್ರಿಗಳಿಗೆ ತನ್ನ ಮಗಳು ದಾನಮ್ಮ ಎಂಬಾಕೆಯು ೨೨-೨-೧೯೮೫ ರಂದು ಮರಣ ಹೊಂದಿರುವುದರ ಬಗ್ಗೆ ದೂರನ್ನು ಕೊಟ್ಟಿರುವುದು ನಿಜ, ಈ ದೂರಿನ ಪ್ರಕಾರ ದಾನಮ್ಮನನ್ನು ಸುಮಾರು ೫ ವರ್ಷಗಳ ಹಿಂದೆ ಜಮಖಂಡಿಯ ಸಿದ್ಧರಾಮಯ್ಯ ಬಸಪ್ಪ ದುಮಕಿ ಎಂಬಾತನಿಗೆ ಕೊಟ್ಟು ಮದುವೆ ಮಾಡಲಾಯಿತೆಂದೂ, ತನ್ನ ಅಳಿಯ ಸಿದ್ಧರಾಮಯ್ಯ ಮತ್ತು ಆತನ ತಾಯಿ ರೇವಕ್ಕ ತನ್ನ ಮಗಳಿಗೆ ಚಿತ್ರಹಿಂಸೆ ಕೊಡುತ್ತಿದ್ದರೆಂದೂ, ಇನ್ನೂ ಹೆಚ್ಚಾಗಿ ಬಂಗಾರವನ್ನು ತೆಗೆದುಕೊಂಡು ಬರಬೇಕೆಂದು ತನ್ನ ಮಗಳಿಗೆ ಹೇಳುತ್ತಿದ್ದರೆಂದೂ, ತನ್ನ ಮಗಳು ಮಹಾಲಿಂಗಪುರದಲ್ಲಿ ಶಿವಲಿಂಗಯ್ಯ ವಸ್ತ್ರದ ಇವರ ಮನೆಯಲ್ಲಿ ಹೊಲಿಗೆ ಕಲಿಯುತ್ತಿದ್ದಳೆಂದೂ, ತನ್ನ ಮಗಳನ್ನು ಅವರ ಆತ್ತೆ ರೇವಕ್ಕ ಹಾಗೂ ಮಹಾಲಿಂಗಪುರದ ಗೌರವ್ವ ಇವರಿಬ್ಬರೂ ಸೇರಿ ನಿಗೂಢ ರೀತಿಯಿಂದ ಕೊಲೆ ಮಾಡಿದ್ದಾರೆಂದೂ, ತನ್ನ ಮಗಳು ಸತ್ತಿರುವ ಬಗ್ಗೆ ತುಂಬಾ ಸಂಶಯ ಇದೆಯೆಂದೂ ತಿಳಿಸಿದ್ದಾರೆ.

೨. ಬೆಳಗಾಂ ಜಿಲ್ಲಾ ಪೋಲೀಸ್ ಅಧಿಕಾರಿಯವರು ಶ್ರೀ ವಸ್ತ್ರದರವರು ೨೨ ವಯಸ್ಸಿನ ದಾನಮ್ಮ ೨೧-೨-೧೯೮೫ರಂದು ಹೊಲಿಗೆ ತರಗತಿಯನ್ನು ಮುಗಿಸಿಕೊಂಡು ಮಾರುತಿ ದೇವಸ್ಥಾನದ ಹತ್ತಿರ ಇರುವ ಬಾವಿಗೆ ಕೈ ತೊಳೆದುಕೊಳ್ಳಲು ಹೋಗಿದ್ದಳೆಂದೂ, ಅಲ್ಲಿ ಆಕಸ್ಮಾತ್ತಾಗಿ ಮುಳುಗಿ ಹೋದಳೆಂದೂ, ಆಕೆಯ ಮೃತ ದೇಹವು ೨೨-೨-೧೯೮೫ ರಂದು ಬಾವಿಯಲ್ಲಿ ತೇಲುತ್ತಿತ್ತೆಂದೂ ಕೊಟ್ಟ ದೂರಿನ ಮೇಲೆ ಮಹಾಲಿಂಗಪುರ ಪೋಲೀಸ್ ಠಾಣೆಯಲ್ಲಿ ೨೨-೨-೧೯೮೫ ರಂದು ಭಾರತೀಯದಂಡ ಪ್ರಕ್ರಿಯಾ ಸಂಹಿತೆ ಕಾಲಂ ೧೭೪ರ ಪ್ರಕಾರ ಯು.ಡಿ.ಆರ್ ನಂ.೬೫ ಎಂದು ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಮೃತ ದೇಹವನ್ನು ೨೨ನೇ ತಾರೀಖಿನಂದೇ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಯಿತು. ವೈದ್ಯಾಧಿಕಾರಿಗಳು ಮರಣದ ಕಾರಣ "Due to Asphyxia as a result of drawning." ಎಂದು ಅಭಿಪ್ರಾಯಪಟ್ಟಿದ್ದಾರೆ. ಜಮಖಂಡಿ ಪೋಲೀಸ್ ಉಪ ವಿಭಾಗಾಧಿಕಾರಿಗಳು ಈ ತನಿಖೆಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದಾರೆ, ಪ್ರಕರಣ ಇನ್ನೂ ತನಿಖಾವಸ್ಥೆಯಲ್ಲಿದೆ.

೩. ಈ ಸಾವಿಗೆ ವರದಕ್ಷಿಣೆ ಮೂಲ ಕಾರಣ ಎಂದು ಮೃತಳ ತಂದೆಯು ದೂರನ್ನು ಇತ್ತಿರುವುದರಿಂದ ಪಂಂದಿನ ತನಿಖೆಯನ್ನು ಸರಕಾರದ ನೀತಿಗೆ ಅನುಗುಣವಾಗಿ ಗುಪ್ತಚಾರ ದಳಕ್ಕೆ ವಹಿಸಲಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇಂಥ ಘಟನೆಗಳು ಪ್ರತಿ ದಿವಸ ನಡೆಯುತ್ತಿವೆ. ಇದರ ಬಗ್ಗೆ ಏನಾದರೂ ಒಂದು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ರಾಜಾಜಿನಗರದಲ್ಲಿ ೨೦ ದಿನಗಳ ಕೆಳಗೆ ವರದಕ್ಷಿಣೆ ಪಿಡುಗಿಗೆ ಒಂದು ಹುಡುಗಿ ಬಲಿಯಾಗಿದೆ. ತಾವು ಆತ್ತೆ, ಮಾವ, ಗಂಡನನ್ನು ಜೈಲ್ ಮೇಲೆ ಬಿಡಬಾರದು. ಈ ಪದ್ಧತಿ ಹೋಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ತಮಗೆ ಗೊತ್ತಿರುವ ಹಾಗೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಜೈಲ್ ಯಾವುದು, ನಾನ್ ಜೈಲ್ ಯಾವುದು ಎಂಬ ಪಟ್ಟಿ ಕೊಟ್ಟಿದ್ದಾರೆ. ಜೈಲ್‌ಬಲ್ ಆಫ್ನ್ಸಸ್, ನಾನ್ ಜೈಲ್‌ಬಲ್ ಆಫ್ನ್ಸಸ್ ಎಂದು ತೀರ್ಮಾನವಾದ ಮೇಲೆ ಆದಕ್ಕನುಗುಣವಾಗಿ ನಡೆದುಕೊಳ್ಳಬೇಕಾಗುತ್ತದೆ.

Bailing is the principle. Refusal to bail is an exception; that is the principle that is being followed. ಅವರ ಮನಸ್ಸಿನ ಉದ್ವೇಗ ಮತ್ತು ಕೋಪವನ್ನು ನಾನು ತಿಳಿದುಕೊಂಡಿದ್ದೇನೆ. ಕಾನೂನಿನಲ್ಲಿ ಬದಲಾವಣೆ ಆಗದ ಹೊರತು ಅವರು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ. ಆದರೂ ಕೂಡ ಈ ರೀತಿ ಪ್ರಕರಣಗಳು ಸಮಾಜದಲ್ಲಿ ಬಂದಾಗ ಬೈಲ್ ಮೇಲೆ ಬಿಡದಿದ್ದರೆ ಮಾತ್ರ ಇದು ನಿಲ್ಲುತ್ತದೆಂದು ಅನ್ನಿಸುವುದಿಲ್ಲ. ಆದು ಒಂದು ಮಾರ್ಗ ಎಂದು ಇಟ್ಟುಕೊಳ್ಳಬಹುದು. ಯಾರೇ ಆಗಲಿ ತಪ್ಪಿತಸ್ಥರು ಎಂದು ಶೀರ್ಮಾನ ಆಗುವವರೆಗೆ ಬೇಲ್ ಮೇಲೆ ಬಿಡುವುದಕ್ಕೆ ಅವಕಾಶ ಇದೆ.

೨—೩೦ ಪಿ. ಎಂ.

ಅವರ ಕೋಪ ಮತ್ತು ಆಗ್ರಹವನ್ನು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಈ ಕಾನೂನನ್ನು ತಿದ್ದುಪಡಿ ಮಾಡದ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಒಂದು ಸಮಿತಿಯನ್ನು ನಿರ್ಮಾಡಾ ಮಾಡಲಾಗಿದೆ. ಮಾನ್ಯ ಸದಸ್ಯರೂ ಕೂಡ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಕೇಂದ್ರ ಸರ್ಕಾರದವರು ಕಾನೂನನ್ನು ಬದಲಾಯಿಸಿದರೆ ನನ್ನ ಅಭ್ಯಂತರ ಏನೂ ಇಲ್ಲ. ನಾನೂ ಅವರ ಕಡೆ ನಾದ ಮಾಡುವುದಕ್ಕೆ ಸಿದ್ಧನಾಗಿದ್ದೇನೆ.

ಮನಿಹಾಳ್ ಗ್ರಾಮದಲ್ಲಿ ಪೋಲೀಸರಿಂದ ನಡೆದ ದೌರ್ಜನ್ಯ

ಶ್ರೀ ಆರ್. ಟಿ. ದೇಸಾಯಿ (ರಾಮದುರ್ಗ).—ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ರಾಮದುರ್ಗ ತಾಲ್ಲೂಕು ಮನಿಹಾಳ್ ಗ್ರಾಮದಲ್ಲಿ ಪೋಲೀಸರಿಂದ ನಡೆದಿರುವ ದೌರ್ಜನ್ಯದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ,

ಶ್ರೀ ಎ, ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ನಗರಾಭಿವೃದ್ಧಿ ಮಂತ್ರಿಗಳು) —ಮಾನ್ಯ ಅಧ್ಯಕ್ಷರೆ, ಗೃಹ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ.

ಮನಿಹಾಳ್ ಸಹಕಾರಿ ಸಾಲದ ಬ್ಯಾಂಕ್ ನಿಯಮಿತ ಈ ಸಂಸ್ಥೆಯ ಅಧ್ಯಕ್ಷರೆನ್ನಲಾದ ಶ್ರೀ ಐ. ಡಿ. ಕಳಸಣ್ಣನವರ್ ಎಂಬುವರ ದೂರಿನ ಮೇರೆಗೆ ರಾಮದುರ್ಗ ಆರಕ್ಷಕ ಠಾಣೆಯಲ್ಲಿ. ಭಾರತೀಯ ದಂಡ ಸಂಹಿತೆ ೪೦೮,೪೦೯ ಕಲಮುಗಳ ಪ್ರಕಾರ ೩-೧-೧೯೮೫ ರಂದು ಅಪರಾಧ ಸಂಖ್ಯೆಯ ೩.೮೫ ಎಂಬುದಾಗಿ ಮೊಕದ್ದಮೆ ಒಂದನ್ನು ದಾಖಲು ಮಾಡಿಕೊಳ್ಳಲಾಯಿತು. ಶ್ರೀ ಕಳಸಣ್ಣನವರ್ ಕೊಟ್ಟಿರುವ ದೂರಿನಲ್ಲಿ ಸಹಕಾರಿ ಸಂಸ್ಥೆಯ ಮ್ಯಾನೇಜರ್ ಹಾಗೂ ಕ್ಯಾಷಿಯರ್, ಇವರುಗಳು ಸಂಸ್ಥೆಗೆ ಸೇರಿದ ೪,೫೮,೩೨೨ ರೂಪಾಯಿಗಳನ್ನು ದುರುಪಯೋಗ ಮಾಡಿದಾರೆಂದು ಆಪಾದಿಸಲಾಗಿದೆ. ಆಪಾದಿತರಲ್ಲಿ ಒಬ್ಬರನ್ನೂ ದಸ್ತಗಿರಿ ಮಾಡಲಾಗಿ ಕೋರ್ಟಿಗೆ ಹಾಜರುಪಡಿಸಲಾಯಿತು. ಅವರು ಕೋರ್ಟಿನಿಂದ ಜಾಮೀನಿನ ಮೇಲೆ ಬಿಡುಗಡೆಯನ್ನು ಹೊಂದಿದ್ದಾರೆ

೨. ತನಿಖಾ ಸಮಯದಲ್ಲಿ ಆಪಾದಿತರು ಕೊಟ್ಟ ಸುಳುವಿನ ಮೇಲೆ ೪೭ ತೊಲ ಬಂಗಾರವನ್ನು ಬೇರೆ ಬೇರೆಯವರಿಂದ ವಶಪಡಿಸಿಕೊಳ್ಳಲಾಯಿತು. ಆಪಾದಿತರು ಮನಿಹಾಳ್ ಗ್ರಾಮದ ನಿವಾಸಿ ಬಸಪ್ಪ ರಾಮಣ್ಣನವರಿಗೆ ಬ್ಯಾಂಕಿಗೆ ಸೇರಿದ ೪೫೫ ತೊಲ ಬಂಗಾರವನ್ನು ವಾಪಸ್ಸಿದ್ದಾರೆಂದು ತಿಳಿದು ಬಂದಿದೆ,

೩. ಬಸಪ್ಪ ರಾಮಣ್ಣನವರ್ ತಲೆ ತಪ್ಪಿಸಿಕೊಂಡಿದ್ದರಿಂದ ಅತನನ್ನು ಕೂಡಲೇ ದಸ್ತಗಿರಿ ಮಾಡಲಾಗಲಿಲ್ಲ. ಈತ ಬೆಳಗಾಂ ಸೆಷನ್ಸ್ ಕೋರ್ಟಿನಿಂದ ನಿರೀಕ್ಷಣಾ ಜಾಮೀನನ್ನು ಪಡೆದಿದ್ದಾನೆ. ದಿನಾಂಕ ೨೦-೩-೧೯೮೫ ರಂದು ರಾಮದುರ್ಗ ಸರಕಾರಿ ಆಸ್ಪತ್ರೆಗೆ ತನ್ನ ಮೇಲೆ ಹಲ್ಲೆ ಮಾಡಿದ ರೆಂಬುದರ ಕಾರಣ ಸೇರಿದ್ದಾನೆ. ಆಸ್ಪತ್ರೆಯಲ್ಲಿ ಇಡಲಾಗಿರುವ ಆಪಘಾತ ರಿಜಿಸ್ಟರ್‌ನಲಿ ಬಸಪ್ಪನ ಮೇಲೆ ಯಾರು ಹಲ್ಲೆ ಮಾಡಿದರು ಎಂದು ನಮೂದಿಸಲಾಗಿಲ್ಲ.

೪. ಪೋಲೀಸರು ಮನಿಹಾಳ್ ಗ್ರಾಮದ ನಿವಾಸಿಗಳ ಮೇಲೆ ಬರ್ಬರ ಕೃತ್ಯಗಳನ್ನು ನಡೆಸುತ್ತಿದ್ದಾರೆ ಎಂಬ ಹಾಗೂ ಹಣ ವಸೂಲಿ ಮಾಡುತ್ತಿದ್ದಾರೆಂಬ ಆಪಾದನೆಗಳು ನಿರಾಧಾರ ಆದವು ಚಿನ್ನವನ್ನು ತನಿಖೆಯ ಅಂಗವಾಗಿ ವಶಪಡಿಸಿಕೊಳ್ಳಲಾಗಿದೆ. ಪೊಲೀಸರು ಬಸಪ್ಪ ರಾಮಣ್ಣನವರ್ ಈತನಿಗೆ ಹಿಂಸೆಯನ್ನು ಕೊಟ್ಟಿಲ್ಲ,